1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

LAC-84/2021

RW- 01

ಪ್ರ. ಬೋ. ದಿನಾಂಕಃ 22-02-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಕಟ್ಟೆಹಳ್ಳೇರ ನಾಗೇಂದ್ರಪ್ಪ |
| ತಂದೆ/ಗಂಡನ ಹೆಸರು | : | ರುದ್ರಪ್ಪ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಹುಣಸೆಕಟ್ಟೆ ಗ್ರಾಮ, ದಾವಣಗೆರೆ ತಾ. |

ಈ ದಿನ ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದಾಗಿರುತ್ತದೆ

ಮುಂದುವರೆದ ಮುಖ್ಯ ವಿಚಾರಣೆಃ- 2 ನೇ ಎದುರುದಾರರ ಪರ ಶ್ರೀ ಕೆ ಬಿ ಎಸ್ ವಕೀಲರಿಂದ.

ಅಸಲು ದಾವಾ ಸಂಖ್ಯೆ19/17 ರಲ್ಲಿ ಆಗಿರುವ ಆದೇಶದ ಪ್ರತಿ , ಮತ್ತು ಡಿಕ್ರಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ನಿಆರ್.1 ಮತ್ತು 2 ಎಂದು ಗುರುತಿಸಲಾಯಿತು. ಆರ್ ಎ .14/14 ರ ಅಂತಿಮ ತೀರ್ಪಿನ ಆದೇಶ ಮತ್ತು ಡಿಕ್ರಿ ಕಾಪಿ ಹಾಜರುಪಡಿಸಿದ್ದು, ಅವುಗಳನ್ನು ನಿಆರ್.3 ಮತ್ತು 4 ಎಂದು ಗುರುತಿಸಲಾಯಿತು. ಆರ್ ಎಸ್ ಎ.865/23 ರ ಇಂಟರ್ ನೆಟ್ ಕಾಪಿಗಳನ್ನು ಹಾಜರುಪಡಿಸಿರುತ್ತೇನೆ.

ಪಾಟೀಸವಾಲುಃ- 1 ನೇ ಪ್ರತಿವಾದಿ ಪರವಾಗಿ ಶ್ರೀ ಎ.ಎಂ.ಹೆಚ್ ವಕೀಲರಿಂದ.

1 ನೇ ಪ್ರತಿವದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

ಪಾಟೀಸವಾಲುಃ- ಅರ್ಜಿದಾರರಪರ ವಕೀಲರಿಂದ.

ಡಿಜಿಪಿ ರವರನ್ನು ಕರೆಸಲಾಗಿ ಗೈರುಹಾಜರು, ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಆರ್ ಡಬ್ಲ್ಯೂ.01

ಇಂದು ದಿ.26-03-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

<u>ಪಾಟೀಸವಾಲುಃ</u> 1 ನೇ ಎದುರುದಾರರ ಪರ ಶ್ರೀ ಎಂ ಎಂ ಹೆಚ್ ವಕೀಲರಿಂದ.

ಸರ್ವೆ ನಂ.27/3 ಬಿ ಜಮೀನಿನ ಪಹಣಿ ಶೇಖರಪ್ಪನ ಹೆಸರಿನಲ್ಲಿರುತ್ತದೆ. ಸದರಿ ಜಮೀನು ಶೇಖರಪ್ಪನಿಗೆ ದಾನ ಪತ್ರದ ಮೂಲಕ ಬಂದಿದೆ ಎನ್ನುವುದು ಸ೯. ದಾನ ಪತ್ರ ಬರೆದ ನಂತರ ಕಲ್ಲಿಂಗಪ್ಪ ಬಿನ್ ಈಶ್ವರಪ್ಪ , ಭರಮಪ್ಪ ಬಿನ್ ಕಲ್ಲಿಂಗಪ್ಪ ಹಾಗೂ ರಮೇಶಪ್ಪ ಬಿನ್ ಕುಪ್ಪಣ್ಣ ರವರು ಈಶ್ವರಪ್ಪನ ಬಿನ್ ಭರಮಪ್ಪ ಮತ್ತು ಶೇಖರಪ್ಪ ಬಿನ್ ಈಶ್ವರಪ್ಪ ರವರ ಮೇಲೆ 2003 ರಲ್ಲಿ ಈ ಜಮೀನಿಗೆ ಸಂಬಂಧಿಸಿದಂತೆ ಗಲಾಟೆ ಮಾಡಿದ್ದರು ಎನ್ನುವುದು ಸರಿ. ಹಾಗೂ ಆ ಸಮಯದಲ್ಲಿ ಆ ಮೂರು ಜನರ ಮೇಲೆ ದಾವೆಯನ್ನು ಹಾಕಿ ಆದೇಶ ಪಡೆದಿದ್ದರು ಎನ್ನುವುದು ಸರಿ. ಆ ನಂತರ ನಾನು ಭಾಗಕ್ಕೆ ಶೇಖರಪ್ಪ ಮತ್ತು ಇತರರ ವೇಲೆ ದಾವೆ ಹಾಕಿದ್ದೆ ಎನ್ನುವುದು ಸರಿ. ಸದರಿ ಪ್ರಕರಣದಲ್ಲಿ ನಾನು ಸಾಕ್ಷಿ ಕೊಟ್ಟಿದ್ದೇನೆ. ಭರಮಪ್ಪ ನನಗೆ ಅಜ್ಜನಾಗಬೇಕು. ಭರಮಪ್ಪನಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ ರುದ್ರಪ್ಪ , ಈಶ್ವರಪ್ಪ, ಸಣ್ಣಜ್ಜಪ್ಪ. ರುದ್ರಪ್ಪನಿಗೆ ನಾನು ಒಬ್ಬನೇ ಮಗ ಎನ್ನುವುದು ಸರಿ. ಸಣ್ಣಜ್ಜಪ್ಪನಿಗೆ ಬಸವರಾಜಪ್ಪ ಎನ್ನುವ ಒಬ್ಬನೇ ಮಗ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಬಸವರಾಜಪ್ಪನಿಗೆ ಮೂರು ಜನ ಹೆಣ್ಣುಮಕ್ಕಳು ಎಂದು ನುಡಿದಿದ್ದಾರೆ. ನಾನು ಸಲ್ಲಿಸಿದ್ದ ದಾವೆಯಲ್ಲಿ ಶೇಖರಪ್ಪ ಹಾಕಿದ್ದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಆ

ದಾವೆಯ ಹತ್ತು ಆಸ್ತಿಗಳು ಇವತ್ತಿಗೂ ಸಹ ನನ್ನ ಅಜ್ಜ ಭರಮಪ್ಪನ ಹೆಸರಿನಲ್ಲಿವೆ ಎನ್ನುವುದು ಸರಿ. ನಾನು ಸಲ್ಲಿಸಿದ್ದ ದಾವೆಯಲ್ಲಿ ನೀಡಿರುವ ಸಾಕ್ಷಿಯ ಬಗ್ಗೆ ನನಗೆ ನೆನಪಿರುತ್ತದೆ. ನಾನು ಆ ಸಾಕ್ಷಿಯನ್ನು ಸತ್ಯಸಂಗತಿಗಳ ಆಧಾರವದೆ ಮೇಲೆ ಹೇಳಿದ್ದೆ ಎನ್ನುವುದು ಸರಿ. ಸದರಿ ದಾವೆ ನನ್ನ ಪರವಾಗಿ ಆದೇಶ ಆಗಿದೆ ಎನ್ನುವುದು ಸರಿ. ನನ್ನ ಪರವಾಗಿ ಆಗಿದ್ದ ಆದೇಶವನ್ನು ಪ್ರಶ್ನಿಸಿ ಶೇಖರಪ್ಪ ಅಪೀಲು ಸಲ್ಲಿಸಿದ್ದ ಎನ್ನುವುದು ಸರಿ. ಸದರಿ ಅಪೀಲ್ ನಲ್ಲಿ ಶೇಖರಪ್ಪನ ಪರವಾಗಿ ಆದೇಶವಾಗಿದೆ ಎನ್ನುವುದು ಸರಿ. ಶೇಖರಪ್ಪ ಹಾಕಿದ್ದ ಅಪೀಲ್ ನಲ್ಲಿ ಒಟ್ಟು ಕುಟುಂಬ ಯಾವುದು ಇಲ್ಲ ಎಂದು ಆದೇಶ ಆಗಿತ್ತು ಎನ್ನುವುದು ಸರಿಯಲ್ಲ.

ಈ ಪ್ರಕರಣದಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎನ್ನುವುದು ಸರಿಯಲ್ಲ. 1966 ನೇ ಇಸ್ವಿಯಲ್ಲಿ ನಾನು ಕೆಲವು ಆಸ್ತಿಗಳನ್ನು ಖರೀದಿ ಮಾಡಿದ್ದೇನೆ. ಸಣ್ಣಜ್ಜಪ್ಪನು ಸಹ ಕೆಲವು ಆಸ್ತಿಗಳನ್ನು ಖರೀದಿ ಮಾಡಿದ್ದಾನೆ ಎನ್ನುವುದು ಸರಿ. ಪಾಲುವಿಭಾಗ ಆದ ನಂತರ ಆ ರೀತಿ ಖೀರಿದಿ ಮಾಡಿದ್ದೇವೆ. ಈ ಆಸ್ತಿಯನ್ನು ಶೇಖರಪ್ಪ ಸ್ವತಹ ಖರೀದಿ ಮಾಡಿದ್ದಾನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿ ಮಾಡಿದ್ದ ಎಂದು ನುಡಿದಿರುತ್ತಾರೆ.

ದುರುದ್ದೇಶದಿಂದ ಹಣ ತೆಗೆದುಕೊಳ್ಳಬೇಕು ಎಂದು ಅರ್ಜಿ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ಸಲ್ಲಿಸಿದ ಅರ್ಜಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸಾಕ್ಷಿ ಪ್ರಮಾಣಪತ್ರದ ಸಂಗತಿಗಳಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ಪ್ರಕರಣದ ಸಂಪೂರ್ಣ ಹಣ ಸೇಖರಪ್ಪನಿಗೆ ಸೇರಬೇಕಾಗಿದೆ ಎನ್ನುವುದು ಸರಿಯಲ್ಲ.

ದಾನ ಪತ್ರ ಆದ ನಂತರ ಆರ್ ಆರ್ ಟಿ ಸಿ ಆರ್ 32/2003-04 ರಂತೆ ಪ್ರಕರಣ ದಾಖಲಾಗಿತ್ತು ಎನ್ನುವುದು ಸರಿ. 1 ನೇ ಪ್ರತಿವಾದಿಗೆ ಮಾತ್ರ ಈ ಪ್ರಕರಣದ ಪರಿಹಾರದ ಹಣ ಬರಬೇಕಾಗುತ್ತದೆ ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.